# ಯುಗದ ಸಾಂಸ್ಕೃತಿಕ ಚಿಂತನೆಯಲ್ಲಿ ವಿಶ್ವಮಾನವ ಮತ್ತು ವಿಶ್ವಧರ್ಮ

ಪ್ರಕಾಶ ಬಿ.

ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಸಿ.

DOI: https://doi.org/10.5281/zenodo.18770681

## ABSTRACT:

ಯುಗಗಳ ಸಾಂಸ್ಕೃತಿಕ ಸಂರಚನೆಯಲ್ಲಿ ಮತ್ತು ಪರಿವರ್ತನೆಯಲ್ಲಿ ಮಾನವತ್ವದಿಂದ ಮೃಗೀಯತ್ವದೆಡೆಗೆ, ಮೃಗೀಯತ್ವದಿಂದ ಮಾನವತ್ವದ ಅನೇಕ ಸಂಘರ್ಷಗಳು ನಡೆಯುತ್ತಲೇ ಬಂದಿವೆ. ಭಾಷೆ, ಧರ್ಮ, ಜಾತಿ, ಪ್ರಭುತ್ವ, ರಾಜಕಾರಣಗಳು ಇದರ ಅಸ್ತ್ರಗಳಾಗಿ ಕಂಡಿವೆ. ಇದರಲ್ಲಿ ಧರ್ಮದ ಶ್ರೇಷ್ಠತೆಯು ಮಾನವತೆಯನ್ನು ಬಿಟ್ಟು ಧರ್ಮದ ರಾಜಕಾರಣಕ್ಕೆ ಅಡಿಪಾಯವಾಗಿ ಮತಬ್ಯಾಂಕ್ ಆಗಿ ರೂಪಾಂತರ ಪಡೆದುಕೊಂಡಿದೆ. ಯುದ್ಧದ ಉನ್ಮಾದಗಳು ಧರ್ಮದ ಮುಖೇನ ಹೊಸ ಅರ್ಥವನ್ನು ವ್ಯಾಖ್ಯಾನಿಸಿಕೊಂಡಿವೆ. ಕುವೆಂಪು ಪ್ರಣೀತ ವಿಶ್ವಮಾನವ ಸಂದೇಶದ ಪಂಚ ಮಂತ್ರಗಳು: ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ. ವಿಶ್ವಮಾನವ ಎಂದರೇನು ಎಂಬುದಕ್ಕೆ ಅತ್ಯಂತ ಸ್ಪಷ್ಟ ಉತ್ತರ ನೀಡುತ್ತದೆ. ಆದರೆ ಇದು ದೇಶ, ಕಾಲ, ಶಿಕ್ಷಣಕ್ಕೆ ಪೂರಕವಾಗಿ ಸಾರ್ವತ್ರಿಕವಾಗಿ ಎಲ್ಲಾ ದೇಶಗಳನ್ನು, ಜನರನ್ನು ಮುಟ್ಟುತ್ತಿಲ್ಲ.

ಪ್ರತಿಯೊಂದು ಮಗುವೂ ಹುಟ್ಟುತ್ತಲೆ ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು ಅಲ್ಪಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು. ಹುಟ್ಟುವಾಗ ವಿಶ್ವಮಾನವನಾಗಿಯೆ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು ಬುದ್ಧನನ್ನಾಗಿ ಪರಿವರ್ತಿಸುವುದೆ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಪ್ರಪಂಚದ ಮಕ್ಕಳೆಲ್ಲ ಅನಿಕೇತನರಾಗಬೇಕು. ಲೋಕ ಉಳಿದು ಬಾಳಿ ಬದುಕಬೇಕಾದರೆ ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲ ಮಾನವರಿಗೂ ಅನ್ವಯವಾಗಬಹುದೋ ಅಂತಹ ಭಾವನೆ, ಅಂತಹ ದೃಷ್ಟಿ ಬರಿಯ ಯಾವುದೋ ಒಂದು ಜಾತಿಗೆ, ಒಂದು ಮತಕ್ಕೆ, ಗುಂಪಿಗೆ, ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ. ಸರ್ವಕಾಲಕ್ಕೂ ಅನ್ವಯವಾಗುವ ಇವು ಮೂಲ ಮೌಲ್ಯಗಳು. ಇದನ್ನು ವಿಶ್ವಧರ್ಮ ಎನ್ನುತ್ತೇವೆ, ಇವರನ್ನು ವಿಶ್ವಮಾನವರು ಎಂದು ಗುರುತಿಸುತ್ತೇವೆ. ಈ ಮೌಲ್ಯಗಳು ಮಾನವರನ್ನು ಕೂಡಿಸಿ ಬಾಳಿಸುವತ್ತ ನಡೆದಾವು. ಗುಂಪುಗಾರಿಕೆಗೆಂದೂ ಇವು ತೊಡಗುವುದಿಲ್ಲ. ಅದೇನಿದ್ದರೂ ರಾಜಕೀಯದ ಕರ್ಮ. ವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿಯೂ ಸಮಷ್ಟಿಯ ಉದ್ಧಾರದ ದೃಷ್ಟಿ ಇದರದು. ಈ ದೃಷ್ಟಿಗೆ ವ್ಯಕ್ತಿಗಳೆಷ್ಟೋ ಅಷ್ಟೂ ವ್ಯಕ್ತಿಗಳು ಸಮಷ್ಟಿಯ ವಿಕಾಸಕ್ಕೆ ಸಾಧಕವಾಗುವುದೂ ಸಾಧ್ಯ. ಈ ದರ್ಶನವನ್ನೇ ವಿಶ್ವಮಾನವ ಗೀತೆ ಸಾರುತ್ತದೆ.

## KEYWORDS:

ವಿಶ್ವಮಾನವ, ವಿಶ್ವಧರ್ಮ, ಕಾರುಣ್ಯ, ಕುವೆಂಪು, ಬುದ್ಧ.

ಕುವೆಂಪು ಮಾನವ ನಿರ್ಮಿತಗಳಾದ ಜಾತಿ, ಜನಾಂಗ, ಮತಧರ್ಮ, ದೇಶ, ಭಾಷೆ, ಕಾಲ, ಲಿಂಗ, ಮೈಬಣ್ಣ ಮುಂತಾದ ಸಕಲವಿಧವಾದ ಭೇದ ಭಾವಗಳು ಮತ್ತು ತಾರತಮ್ಯಗಳೆಲ್ಲವೂ ಸೇರಿ ಒಂದು ಖೆಡ್ಡಾರಚನೆ ಎನಿಸುತ್ತದೆ. ಮಾನವನ ವಿಕಾಸದ ಹಾದಿಯಲ್ಲಿ ಆಯಾ ಕಾಲದ ಅಗತ್ಯವನ್ನು ಪೂರೈಸಲು ಮಹಾಪುರುಷರು ಸಂಭವಿಸಿ ಹೋಗಿದ್ದಾರೆ. ಅವರಲ್ಲಿ ಕೆಲವರ ವಾಣಿ ವಿಶಿಷ್ಟ ಧರ್ಮವಾಗಿ ರೂಪುಗೊಂಡು ಕಡೆಗೆ ಮತವಾಗಿ ಪರಿಮಿತವಾಯಿತು. ಮಾನವರನ್ನು ಕೂಡಿಸಿ ಬಾಳಿಸಬೇಕೆಂಬ ಸದುದ್ದೇಶದಿಂದ ಹುಟ್ಟಿಕೊಂಡ ಮಹಾತ್ಮರ ವಾಣಿ ಮತವಾಗಿ ಮಾದಕವಾಯಿತು. ಒಂದು ಯುಗಕ್ಕೆ ಅಗತ್ಯವೆನಿಸಿದ ಧರ್ಮ ಕಾಲಾನುಕಾಲಕ್ಕೆ ಮತವಾಗಿ ನಿರುಪಯುಕ್ತವೆನಿಸಿ ಮತ್ತೊಂದು ಹೊಸ ಧರ್ಮಕ್ಕೆ ಎಡೆ ಕೊಟ್ಟುದೂ ಉಂಟು. ಹೀಗಾಗಿ ಅನೇಕ ಧರ್ಮಗಳು ಮತಗಳಾಗಿ ಜನತೆಯನ್ನು ಗುಂಪು ಗುಂಪಾಗಿ ಒಡೆದಿವೆ; ಯುದ್ಧಗಳನ್ನು ಹೊತ್ತಿಸಿವೆ. ಜಗತ್ತಿನ ಕ್ಷೋಭೆಗಳಿಗೆಲ್ಲಾ ಮೂಲ ಕಾರಣವೆಂಬಂತೆ ವಿನೋಬಾ ಭಾವೆಯವರು ಹಿಂದೆ ಹೇಳಿದಂತೆ ಮತ ಮತ್ತು ರಾಜಕೀಯದ ಕಾಲ ಆಗಿ ಹೋಯಿತು. ಇನ್ನೇನಿದ್ದರೂ ಅಧ್ಯಾತ್ಮ ಮತ್ತು ವಿಜ್ಞಾನದ ಕಾಲ ಬರಬೇಕಾಗಿದೆ. ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜಮತ. ಆ ಪಥ ಈ ಪಥ ಅಲ್ಲ; ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಮಿತ ಮತದ ಆಂಶಿಕ ದೃಷ್ಟಿಯಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ, ಎಲ್ಲವನ್ನೂ ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ. ವಿಶ್ವಮಾನವ, ವಿಶ್ವಧರ್ಮ, ಮಾನವಕುಲ ಒಂದಾಗಿ ಬದುಕಲು ಮೊದಲಿಗೆ ವಿಶ್ವಮಾನವ ಆಗಬೇಕು. ವಿಶ್ವಮಾನವರಾಗಿ ಅತ್ಯುನ್ನತಿ ಸಾಧಿಸಲು ವಿಶ್ವಧರ್ಮ ಪಾಲಿಸಬೇಕು. ವಿಶ್ವಧರ್ಮ ದೃಷ್ಟಿ ಬೆಳೆಸಿಕೊಂಡವರು ಇಡೀ ಮಾನವಕುಲ ಒಂದಾಗಿ ತಾವಿರುವ ಕಡೆಯೇ ವಿಶ್ವಮಾನವರಾಗಿ, ವಿಶ್ವಧರ್ಮ ಪ್ರಸಾರಕರಾಗಿ ವಿಶ್ವಮಾತೆಯ ಗರ್ಭಸ್ಥ ಶಿಶುಗಳಾಗಬೇಕು. ಇದೇ ಪಂಚಮಂತ್ರದ ತಿರುಳು ವಿಚಾರ.

“ಮತ ಧರ್ಮಗಳ ವಿಚಾರದಲ್ಲಿ ಜಗಳವಾಡಬೇಡ, ಸಾಂಗತ್ಯ ಶ್ಲಾಘನೀಯವಾದದ್ದು, ಸತ್ಯದ ಮೇಲೆ ನಿನ್ನ ಸಂಪೂರ್ಣ ಸ್ವಾಮ್ಯವಿದೆಯೆಂದು ಕಲ್ಪನೆ ಮಾಡಿಕೊಳ್ಳಬೇಡ. ನಿನ್ನ ಸ್ವಾಮ್ಯ ಇಲ್ಲದೆ ಇರಬಹುದು. ಯಾವ ಮತಧರ್ಮವೂ ಸತ್ಯದ ಮೇಲೆ ಪೂರ್ಣ ಸ್ವಾಮ್ಯ ಹೊಂದಿರುವುದಿಲ್ಲ. ವ್ಯಕ್ತಿಗಳಲ್ಲಿ ಅಭಿವ್ಯಕ್ತಿಯಾಗುವ ದೇವರನ್ನು ಅರಿಯಲು ಪ್ರಯತ್ನಿಸು.” ಎಂದು ಅಶೋಕನ ಶಾಸನವೊಂದರಲ್ಲಿ ಬರೆದದ್ದು ಮಾರ್ಮಿಕವಾಗಿದೆ. 21ನೇ ಶತಮಾನದಲ್ಲಿಯಂತೂ ಭಾರತೀಯರಿಗೆ ಈ ಶಾಸನದ ಆಶಯ ಬಹಳಷ್ಟು ಅವಶ್ಯವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಶೀಘ್ರವಾಗಿ ಬೆಳೆಯುತ್ತಿರುವ ಈ ಕಾಲದಲ್ಲಿ ಮಾನವರಿಗೆ ಇಡೀ ವಿಶ್ವವೇ ಒಂದು ಗೂಡಾಗಿ ಪರಿಣಮಿಸಿದೆ. “ಯತ್ರ ವಿಶ್ವಂ ಭವತಿ ಏಕ ನೀಡಂ” (ಇಡೀ ವಿಶ್ವವೇ ಒಂದು ಗೂಡು)

ಎಂಬ ಕೃಷ್ಣ ಯಜುರ್ವೇದದ ಉಕ್ತಿ ಸತ್ಯವಾಗಿದೆ. ಬಹು ದೇಶಗಳು, ಬಹು ಸಂಸ್ಕೃತಿಗಳು, ಬಹು ಭಾಷೆಗಳು, ಬಹು ಧರ್ಮಗಳು, ಬಹು ಜನಾಂಗಗಳು ಎಲ್ಲವೂ ಒಂದೇ ವಿಶ್ವದಲ್ಲಿ ಇರುವಂಥವು. ಎಲ್ಲ ಮಾನವರು ಒಂದೇ ಗೂಡಲ್ಲಿ ಇರುವ ಹಕ್ಕಿಯ ಮರಿಗಳಂತೆ ಅವೆಲ್ಲ ವೈವಿಧ್ಯದೊಂದಿಗೆ ಸಮಾನತೆ ಮತ್ತು ಸೌಹಾರ್ದದಿಂದ ಇರಬೇಕು ಎಂಬ ಆಶಯ ಈ ಸಾಲಿನಲ್ಲಿ ಅಡಗಿದೆ. ಹೀಗೆ ಯಾವಾಗ ವಿಶ್ವ ಒಂದು ಗೂಡಾಗುವುದೋ ಆಗ ಅದು ಸರ್ವ ಸಮಾನತೆಯ ವಾಸಸ್ಥಳವಾಗುವುದು ಎಂಬುದು ಈ ಸಾಲಿನ ಆಶಯವಾಗಿದೆ. ವಿಶ್ವಮಾನವ, ವಿಶ್ವಧರ್ಮದ ಸಾರವನ್ನು ಅರ್ಥೈಸಲು ಈ ಆಶಯದ ನುಡಿಗಳು ಎಲ್ಲರ ಎದೆಗೆ ನಾಟಬೇಕು.

ಯಾವುದೋ ಒಂದು ಧರ್ಮವನ್ನು ಎತ್ತಿಕೊಂಡು "ಇದು ವಿಶ್ವಧರ್ಮ" ಎಂದು ಹೇಳಲಿಕ್ಕಾಗದು. ಆಧುನಿಕ ಮಾನವನಿಗೆ ಬದುಕಲು ಒಂದೇ ಧರ್ಮ ಸಾಲದು. ವಿಮಾನ ಮುಂತಾದ ಆಧುನಿಕ ಸಾರಿಗೆ ವ್ಯವಸ್ಥೆ, ರೇಡಿಯೊ, ಟಿ.ವಿ., ಸ್ಮಾರ್ಟ್ ಫೋನ್ ಮತ್ತು ಇಂಟರ್‌ನೆಟ್ ಮುಂತಾದ ಜಾಲತಾಣಗಳ ಮೂಲಕ ವಿಶಾಲವಾದ ಜಗತ್ತು ಚಿಕ್ಕದಾಗಿ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳು ನಮ್ಮ ಅರಿವನ್ನು ಹೆಚ್ಚಿಸಿವೆ. ಆಧುನಿಕ ಮನುಷ್ಯ ಕೇವಲ ಒಂದು ಧರ್ಮಗ್ರಂಥದ ಮೂಲಕ ಬದುಕಲು ಸಾಧ್ಯವಿಲ್ಲ. ಪ್ರತಿ ಧರ್ಮ ಗ್ರಂಥವೂ ಮಾನವಕುಲದ ಏಳ್ಗೆಗೆ ತನ್ನದೇ ಆದ ಕಾಣಿಕೆ ನೀಡಿದೆ. ಆಧುನಿಕ ಸಿದ್ಧಾಂತಗಳ ಜ್ಞಾನದ ಜೊತೆ ಅನೇಕ ಧರ್ಮಗ್ರಂಥಗಳಲ್ಲಿನ ಮಾನವೀಯ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುತ್ತ ಯಾಂತ್ರಿಕ ಮತ್ತು ಸೈಬರ್ ಅಪರಾಧದ ವಾತಾವರಣದ ಬದುಕಿನಲ್ಲಿ ನೆಮ್ಮದಿ ಪಡೆಯಲು ಮಾನವರು ತಮ್ಮ ಧರ್ಮಗಳನ್ನು ಮೀರಿ ಪ್ರಯತ್ನಿಸಬೇಕಾಗಿದೆ. ಧರ್ಮಗಳನ್ನು ಮೀರುವುದೆಂದರೆ ಧರ್ಮಗಳನ್ನು ಬಿಡಬೇಕು ಎಂದಲ್ಲ. ಅದು ಅವರವರ ಆಯ್ಕೆಗೆ ಬಿಟ್ಟಿದ್ದು. ದೈವವಾದಿಗಳು, ಸಂದೇಹವಾದಿಗಳು ಮತ್ತು ನಿರೀಶ್ವರರು ಕೂಡ ಧರ್ಮಗಳಲ್ಲಿನ ಮಾನವೀಯ ಮೌಲ್ಯಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ವಿವಿಧ ಧರ್ಮಗಳ ಬಹುಪಾಲು ಧರ್ಮಗುರುಗಳು ತಮ್ಮ ತಮ್ಮ ಧರ್ಮಗಳಲ್ಲಿನ ಮೌಲ್ಯಗಳ ಬಗ್ಗೆ ತಿಳಿಸದೆ, ಕೇವಲ ಧಾರ್ಮಿಕ ವಿಧಿವಿಧಾನಗಳ ಬಗ್ಗೆಯೆ ಒತ್ತುಕೊಡುವುದರಿಂದ ವಿವಿಧ ಧರ್ಮಗಳ ಅನೇಕ ಯುವಕರು ತಮ್ಮ ತಮ್ಮ ಧರ್ಮಗಳಿಂದ ದೂರ ಸರಿಯುತ್ತಿದ್ದಾರೆ. ಇಂದು ವಿಶ್ವದ ಜನಸಂಖ್ಯೆ 812 ಕೋಟಿ ಇದೆ. ಅದರಲ್ಲಿ ಕ್ರಿಶ್ಚಿಯನ್ನರು 237 ಕೋಟಿ, ಮುಸ್ಲಿಮರು 190 ಕೋಟಿ, ಹಿಂದುಗಳು 120 ಕೋಟಿ, ನಾಸ್ತಿಕರು ಮತ್ತು ಧರ್ಮದಿಂದ ದೂರ ಉಳಿದವರು 111 ಕೋಟಿ ಇದ್ದಾರೆ. ಐರೋಪ್ಯ ರಾಷ್ಟ್ರಗಳಲ್ಲೇ ನಾಸ್ತಿಕರ ಸಂಖ್ಯೆ ಹೆಚ್ಚಾಗಿದ್ದು ಉಳಿದ ಕಡೆಗಳಲ್ಲಿ ಬಹಳ ಕಡಿಮೆ ಇದೆ. ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ಹೆಚ್ಚೆಚ್ಚು ಯುವಕರು ನಾಸ್ತಿಕರಾಗುತ್ತಿದ್ದಾರೆ. ಹೀಗಾಗಿ ಅವರು ಧರ್ಮಗಳಲ್ಲಿನ ಮೌಲ್ಯಗಳ ಬಗ್ಗೆ ವಂಚಿತರಾಗುತ್ತಿದ್ದಾರೆ. ಇದರ ಹೊಣೆಯನ್ನು ಧರ್ಮಗುರುಗಳೇ ಹೊತ್ತುಕೊಳ್ಳುವುದು ಅನಿವಾರ್ಯವಾಗಿದೆ ಎಂದು ರಂಜಾನ್ ದರ್ಗಾರವರು ತಮ್ಮ 'ಧರ್ಮ ಸಾಮರಸ್ಯ' ಲೇಖನದಲ್ಲಿ ತಿಳಿಸುತ್ತಾರೆ. ಅನೇಕ

ಮತಧರ್ಮ, ಜಾತಿ, ಭಾಷೆಗಳ ವೈವಿಧ್ಯತೆಯನ್ನು ಹೊಂದಿರುವ ಭಾರತ ದೇಶದಲ್ಲಿ ಧಾರ್ಮಿಕ ಸಾಮರಸ್ಯದ ಅಗತ್ಯತೆಯನ್ನು, ವಿಶ್ವಮಾನವ ಪರಿಕಲ್ಪನೆಗೆ ನಾವು ತೆರೆದುಕೊಳ್ಳಬೇಕು ಎನ್ನುವ ಸಂದೇಶವನ್ನು ಇಲ್ಲಿ ಕಾಣಲಾಗುತ್ತದೆ.

"ಪೃಥ್ವಿಯಿಂದ ಸಕಲ ಜೀವರೆಲ್ಲರು ಉದ್ಭವಿಸಿದರು" ಎಂದು ಅಲ್ಲಮ ಪ್ರಭುಗಳು ಹೇಳಿದ್ದಾರೆ. ಸಕಲ ಜೀವಾತ್ಮರ ತಾಯಿ ಪೃಥ್ವಿಯೆ ಆಗಿದೆ. ಪೃಥ್ವಿಗೆ ಯಾರೂ ಹೊರಗಿನವರಲ್ಲ. ಮಾನವರು ಹುಟ್ಟಿದ ನಂತರ, ಅವರ ಮೂಲಕ ಎಲ್ಲ ಧರ್ಮಗಳು ಹುಟ್ಟಿವೆ. ವಿವಿಧ ಧರ್ಮಗಳಲ್ಲಿ ಹುಟ್ಟಿದ ಮಾನವರು ತಮ್ಮ ಮೂಲವನ್ನೇ ಮರೆತಿದ್ದಾರೆ. ಆದ್ದರಿಂದ "ಧರ್ಮಗಳು ಹುಟ್ಟುವ ಮೊದಲು ಮಾನವರೆಲ್ಲ ಒಂದೇ ಆಗಿದ್ದರು" ಎಂಬುದರ ಅರಿವಾಗುವುದು ಅವಶ್ಯವಾಗಿದೆ. ಆ ಅರಿವು ಆಚರಣೆಯಲ್ಲಿ ಬಂದಾಗ ವಿವಿಧ ಧರ್ಮಗಳಲ್ಲಿ ಹರಿದು ಹಂಚಿಹೋಗಿರುವ ಮಾನವಕುಲ ಒಂದಾಗಲು ಸಾಧ್ಯ. ಪ್ರತಿಯೊಬ್ಬ ಮನುಷ್ಯ ತಾನು ಇಷ್ಟಪಟ್ಟ ಧರ್ಮವನ್ನು ಹೊಂದಿ ಉಳಿದ ಧರ್ಮಗಳವರ ಜೊತೆ ಮತ್ತು ಯಾವುದೇ ಧರ್ಮ ಪಾಲನೆ ಮಾಡದವರ ಜೊತೆಗೂ ಕೂಡಿ ಬದುಕುವ ಕಲೆಯನ್ನು ಸಾಧಿಸಬಲ್ಲ. ವಿಶ್ವಧರ್ಮ ಪಾಲನೆಯನ್ನು ಮಾನವರು ಅನುಸರಿಸಬೇಕು.

ಧಾರ್ಮಿಕ ಆಚರಣೆಗಳನ್ನು ಮುಂದೆ ಮಾಡುವ ಮೂಲಕ, ಅನ್ಯ ಧರ್ಮೀಯರನ್ನು ಹೊರಹಾಕುವ ಸ್ವಧರ್ಮ ಪಾಲನೆ ಮಾಡುತ್ತಲೇ ಎಲ್ಲ ಧರ್ಮಗಳ ಜನರನ್ನು ಒಳಗೊಳ್ಳುವ ಸಂಸ್ಕೃತಿಗಳನ್ನು ವಿಶ್ವದ ಎಲ್ಲೆಡೆ ಕಾಣುತ್ತಿದ್ದೇವೆ. ಪ್ರತಿ ಧರ್ಮದಲ್ಲಿ ಹೊರಹಾಕುವ ಮತ್ತು ಒಳಗೊಳ್ಳುವ ಸಂಸ್ಕೃತಿಗಳಿವೆ. ಇವು ಒಂದೇ ಧರ್ಮದ ಎರಡು ಮುಖಗಳಾಗಿವೆ. ಹೊರಹಾಕುವ ಸಂಸ್ಕೃತಿಗಳು ಧಾರ್ಮಿಕ ಆಚರಣೆಗಳನ್ನು ಮುಂದೆ ಮಾಡುತ್ತವೆ. ಒಳಗೊಳ್ಳುವ ಸಂಸ್ಕೃತಿಗಳು ಧರ್ಮದ ಜೀವನಮೌಲ್ಯಗಳನ್ನು ಮುಂದೆ ಮಾಡುತ್ತವೆ. "ಹಿಂದೆ ಇದ್ದ ಧರ್ಮಗಳನ್ನೆಲ್ಲ ಸ್ವೀಕರಿಸುತ್ತೇನೆ. ಮುಂದೆ ಬರುವುದನ್ನು ಸ್ವೀಕರಿಸುವುದಕ್ಕೆ ಹೃದಯ ತೆರೆದಿರುತ್ತೇನೆ. ಮಸೀದಿಗೆ ಹೋಗುತ್ತೇನೆ. ಚರ್ಚಿನಲ್ಲಿ ಶಿಲುಬೆಯ ಎದುರು ತಲೆಬಾಗುತ್ತೇನೆ. ಬುದ್ಧ ವಿಹಾರಕ್ಕೆ ಹೋಗಿ ಬೌದ್ಧ ಧರ್ಮದ ತತ್ವಗಳಿಗೆ ಶರಣೆನ್ನುತ್ತೇನೆ. ಹಿಂದೂಗಳೊಂದಿಗೆ ಅರಣ್ಯಕ್ಕೆ ಹೋಗಿ ಎಲ್ಲೆಲ್ಲಿಯೂ ಬೆಳಗುತ್ತಿರುವ ಆ ಪರಂಜ್ಯೋತಿಯ ದರ್ಶನ ಧ್ಯಾನ ಮಗ್ನನಾಗುತ್ತೇನೆ" ಎಂದು ಹೇಳುವ ಮೂಲಕ ಸ್ವಾಮಿ ವಿವೇಕಾನಂದರು ಮಾನವಧರ್ಮದ ಭಾಷ್ಯ ಬರೆದಿದ್ದಾರೆ. ಆ ಮೂಲಕ ಧರ್ಮಗಳ ಸಾಂಘಿಕ ಆಚರಣೆಯನ್ನು ಮೀರಿದ ವಿಶ್ವಮಾನ್ಯ ಮೌಲ್ಯಗಳ ಕಡೆಗೆ ನಮ್ಮ ಗಮನವನ್ನು ಹರಿಸುತ್ತಾರೆ. ಮುಂದೆ ಬರಬಹುದಾದ ಧರ್ಮಗಳಲ್ಲಿನ ಮೌಲ್ಯಗಳನ್ನು ಸ್ವೀಕರಿಸುವುದಕ್ಕೂ ಕಾತರರಾಗಿದ್ದಾರೆ. ಮಾನವಧರ್ಮ ನಿರಂತರವಾಗಿ ರೂಪುಗೊಳ್ಳುತ್ತ ಹೋಗುವ ಬಗೆ ಇದು.

ಮಾನವಧರ್ಮದಲ್ಲಿ ಧಾರ್ಮಿಕ ಆಚರಣೆಗಳು ಕೇವಲ ಸಂಕೇತವಾಗಿ ಉಳಿಯುತ್ತವೆ. ಆಯಾ ಧರ್ಮದವರು ಅವುಗಳನ್ನು ಆಚರಿಸಬಹುದು. ಆದರೆ ಎಲ್ಲ

ಧರ್ಮಗಳಲ್ಲಿನ ವಿಶ್ವಮಾನ್ಯ ಮೌಲ್ಯಗಳನ್ನು ಒಂದಾಗಿಸಿಕೊಂಡು ವೈಚಾರಿಕ ದಿಸೆಗೆ ಸಾಧಿಸುವುದೇ ಮಾನವಧರ್ಮದ ಮೂಲ ಉದ್ದೇಶವಾಗಿದೆ. ವೈಜ್ಞಾನಿಕ ಮನೋಭಾವದ ಹಿನ್ನೆಲೆಯಲ್ಲಿ ಜೀವಕಾರುಣ್ಯದಿಂದ ಕೂಡಿದ ಸರ್ವಧರ್ಮಗಳ ಮೌಲ್ಯಗಳ ಸಮ್ಮಿಲನವೇ ಮಾನವಧರ್ಮ. ಒಂದು ಧರ್ಮ ಮತ್ತೊಂದು ಧರ್ಮಕ್ಕೆ ಬಾಧಕವಾಗಬಾರದು. ಹಾಗಾದರೆ ಅದು ಧರ್ಮವೇ ಅಲ್ಲ. ಧರ್ಮಗಳಲ್ಲಿ ವಿರೋಧ ಇಲ್ಲದಿರುವುದೇ ಸದ್ಧರ್ಮ ಎಂದು ಮಹಾಕಾವ್ಯವಾದ ಮಹಾಭಾರತದಲ್ಲಿ ಹೇಳಲಾಗಿದೆ. ಧರ್ಮಗಳಲ್ಲಿನ ಮೌಲ್ಯಗಳನ್ನು ಅರ್ಥ ಮಾಡಿಕೊಂಡರೆ ಒಂದು ಧರ್ಮ ಇನ್ನೊಂದು ಧರ್ಮಕ್ಕೆ ಬಾಧಕವಾಗಲಾರದು. ಧರ್ಮಗಳು ಬೇರೆ ಬೇರೆಯಾದರೂ ಆಯಾ ಧರ್ಮಗಳ ಜೀವನಮೌಲ್ಯಗಳು ಒಂದಕ್ಕೊಂದು ಬಾಧಕವಾಗಲಾರವು. ಆಯಾ ಧರ್ಮಗಳಲ್ಲಿನ ಸಾಂಪ್ರದಾಯಿಕ ಆಚರಣೆಗಳೇ ಮುನ್ನೆಲೆಗೆ ಬಂದರೆ ಒಂದಕ್ಕೊಂದು ತಾಕಲಾಟವಾಗಿ ಕುಧರ್ಮದ ಸ್ಥಾನದಲ್ಲಿ ನಿಲ್ಲುತ್ತವೆ. ಅಂಥ ಗಳಿಗೆಯಲ್ಲೇ ಕೋಮುವಾದದ ಜನನವಾಗುವುದು. ಕೊಲೆ, ಸುಲಿಗೆ, ಜನಾಂಗ ಹತ್ಯೆಗಳಾಗುವವು, ನಂತರ ಯುದ್ಧವೂ ನಡೆದು ಧರ್ಮಯುದ್ಧ ಎಂದು ಕರೆಯಿಸಿಕೊಂಡು ಧರ್ಮಗಳನ್ನು ಅವಮಾನಿಸಲಾಗುವುದು.

ಭಾರತದಲ್ಲಿ 19ನೇ ಶತಮಾನದಲ್ಲಿ ಇಂಥ ದುರಂತ ಸ್ಥಿತಿಯನ್ನು ಕಂಡ ಸ್ವಾಮಿ ವಿವೇಕಾನಂದರು, "ಸತ್ಯ ನನ್ನ ದೇವರು, ವಿಶ್ವ ನನ್ನ ದೇಶ, ವಿಭಿನ್ನ ಧರ್ಮಗಳು ಒಂದೇ ಧರ್ಮದ ಅನಂತ ರೂಪಗಳೆಂಬುದನ್ನು ಕಲಿಸಬೇಕು. ಇದರಿಂದ ಪ್ರತಿಯೊಬ್ಬನು ತನಗೆ ಯಾವುದು ಉತ್ತಮ ಧರ್ಮವೋ ಅದನ್ನು ಅನುಸರಿಸಬಹುದು" ಎಂದು ತಿಳಿಸಿದ್ದಾರೆ. "ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು. ವೇದಾಂತದ ಮಿದುಳು, ಇಸ್ಲಾಮಿನ ದೇಹ; ಇದೊಂದೇ ನಮ್ಮ ಅಭಿವೃದ್ಧಿಗೆ ದಾರಿ" ಎಂದು ಅವರು ಸಾರಿದ್ದಾರೆ. ಆದರೆ ಭಾರತೀಯರಲ್ಲಿ ಕೋಮುವಾದ ಇನ್ನೂ ಜೀವಂತವಾಗಿದೆ. ತಮ್ಮ ತಮ್ಮ ಧರ್ಮಗಳ ಮಹತ್ವವನ್ನು ಅರಿಯದವರು ಬೇರೆಯವರ ಧರ್ಮಗಳ ಮಹತ್ವ ಅರಿಯಲು ಸಾಧ್ಯವಿಲ್ಲ. ಇಂಥ ವಿಷಮ ವಾತಾವರಣ ಭಾರತದಲ್ಲಿ ಸೃಷ್ಟಿಯಾಗುತ್ತಿದೆ. ಇಲ್ಲಿ ಮೂಲಭೂತವಾದ ಮತ್ತು ಕೋಮುವಾದಗಳೇ ರಾಜಕೀಯ ಅಸ್ತ್ರವಾಗುತ್ತಿವೆ. "ಆನೋ ಭದ್ರಾ ಕೃತವೋ ಯಂತು ವಿಶ್ವತಃ" ಅಂದರೆ ಉದಾತ್ತ ವಿಚಾರಗಳು ನಮಗೆ ಎಲ್ಲೆಡೆಯಿಂದ ಬರಲಿ ಎಂಬ ಋಗ್ವೇದದ ಆಶಯ ಕೇವಲ ಆಶಯವಾಗಿಯೇ ಉಳಿದಿದೆ.

"ಓಂ ಸಹನಾವವತು ಸಹ ನೌ ಭುನಕ್ತು ಸಹ ವೀರ್ಯಂ ಕರವಾವಹೈ ತೇಜಸ್ವಿ ನಾವಧೀತಮಸ್ತು ಮಾವಿದ್ವಿಷಾವಹೈ" (ದೇವರು ನಮ್ಮಿಬ್ಬರನ್ನು ರಕ್ಷಿಸಲಿ, ನಾವು ಕೂಡಿ ಬಾಳೋಣ, ನಾವು ಸಮರ್ಥರಾಗೋಣ. ನಾವು ತೇಜಸ್ವಿಗಳಾಗೋಣ. ನಾವು ದ್ವೇಷ ತೊರೆಯೋಣ), ಓಂ ಶಾಂತಿಃ ಶಾಂತಿಃ ಶಾಂತಿಃ ಎಂದು ತೈತ್ತಿರೀಯ ಉಪನಿಷತ್ ಸಾರುತ್ತದೆ. ದ್ವೇಷ ತೊರೆದು ಕೂಡಿ ಬದುಕುವುದು, ಕೂಡಿ ಉಣ್ಣುವುದು ಮತ್ತು ಮಾನವ ಘನತೆಯೊಂದಿಗೆ ತೇಜಸ್ವಿಗಳಾಗಿ ಬದುಕೋದು ಮಾನವಧರ್ಮದ

ಲಕ್ಷಣವೇ ಆಗಿದೆ. "ಒಬ್ಬ ಹಿಂದೂ ಇನ್ನೂ ಉತ್ತಮವಾದ ಹಿಂದೂ ಆಗಿರುವಂತೆ, ಒಬ್ಬ ಮುಸ್ಲಿಂ ಇನ್ನೂ ಉತ್ತಮವಾದ ಮುಸ್ಲಿಂ ಆಗುವಂತೆ, ಒಬ್ಬ ಕ್ರೈಸ್ತ ಇನ್ನೂ ಉತ್ತಮವಾದ ಕ್ರೈಸ್ತ ಆಗುವಂತೆ ನಾವು ನೆರವಾಗಬೇಕು" ಎಂದು ಗಾಂಧೀಜಿ ತಿಳಿಸಿದ್ದಾರೆ. ನಾವು ಮಾನವ ಧರ್ಮೀಯರಾದಾಗ ಮಾತ್ರ ಹೀಗೆ ನೆರವಾಗಲು ಸಾಧ್ಯವಾಗುವುದು. ಮೊದಲು ಮಾನವರಾದಾಗಲೇ ಒಳ್ಳೆಯ ಹಿಂದೂ ಅಥವಾ ಮುಸ್ಲಿಮನಾಗಲು ಸಾಧ್ಯ. ನಾವು ವಿಶ್ವಮಾನವ ಧರ್ಮದಲ್ಲಿ ಕಾಲಿಟ್ಟಾಗ ನಾವು ಮಾನವರಾಗಲು ಸಾಧ್ಯ.

"ಈ ಲೋಕದ ಮಾಲಿನ್ಯದ ಮಧ್ಯೆ ನಿರ್ಮಲವಾದುದನ್ನು ಸಾಧಿಸುವುದೇ ಧರ್ಮ, ಹಿಂದೂ ಇಲ್ಲ, ಮುಸ್ಲಿಂ ಇಲ್ಲ, ಇರೋದು ಕೇವಲ ಮನುಷ್ಯ" ಎಂದು ಗುರುನಾನಕರು ತಿಳಿಸಿದ್ದಾರೆ. "ಒಂದೇ ಜಾತಿ ಒಂದೇ ಧರ್ಮ ಒಬ್ಬನೇ ದೇವರು" ಎಂದು ನಾರಾಯಣ ಗುರು ಹೇಳಿದ್ದಾರೆ. "ದಯೆವಿಲ್ಲದ ಧರ್ಮ ಅದೇವುದಯ್ಯಾ?" ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ದಯೆವಿಲ್ಲದ ಧರ್ಮ ಏನು ಮಾಡುವುದಯ್ಯಾ ಎಂದು ಅವರು ಕೇಳುವುದರಲ್ಲಿ ಆಳವಾದ ಚಿಂತನೆ ಇದೆ. ಧರ್ಮಗಳು ದಯೆಯನ್ನು ಕಳೆದುಕೊಂಡರೆ ಕೋಮುವಾದಿ ಕೊಲೆಗಡುಕರ ಕೈಯಲ್ಲಿನ ಖಡ್ಗಗಳಾಗುತ್ತವೆ. ಧರ್ಮದ ಹೆಸರಿನಲ್ಲಿ ಉಗ್ರಗಾಮಿಗಳು ಹುಟ್ಟತೊಡಗುತ್ತಾರೆ. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದಕ್ಕೆ ಬಸವಣ್ಣನವರು ದಯೆ ಎಂದು ಕರೆದಿದ್ದಾರೆ. ಅವರು ವಿಶ್ವಪ್ರೇಮವನ್ನು ದಯೆಯ ರೂಪದಲ್ಲಿ ಕಂಡಿದ್ದಾರೆ. ಈ ವಿಶ್ವಪ್ರೇಮಕ್ಕೆ ಸೂಫಿಗಳು "ಇಶ್ಕ್" ಎಂದು ಕರೆದಿದ್ದಾರೆ. ಜೈನರಲ್ಲಿ ಅದು "ಅಹಿಂಸೆ"ಯ ಪರಿಕಲ್ಪನೆಯಲ್ಲಿ ಇದೆ. "ಅಹಿಂಸಾ ಪರಮೋ ಧರ್ಮ" ಅಂದರೆ ಅಹಿಂಸೆಯೇ ಸರ್ವೋಚ್ಚ ಧರ್ಮ ಎಂದು ಜೈನ ಧರ್ಮ ಹೇಳುತ್ತದೆ. ಇದೇ ದಯೆ ಬೌದ್ಧರಲ್ಲಿ "ಕರುಣಾಶೀಲ ಮೈತ್ರಿ"ಯ ರೂಪದಲ್ಲಿದೆ. ಈ ಎಲ್ಲಾ ಕಲ್ಪನೆಗಳು ವಿಶ್ವಮಾನವ, ವಿಶ್ವಧರ್ಮದ ತತ್ವದಡಿ ಸೇರುತ್ತವೆ. "ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ ಕೂಡಲಸಂಗಮದೇವಾ" ಎಂದು ಬಸವಣ್ಣನವರು ಹೇಳುವ ಮೂಲಕ ಒಳಗೊಳ್ಳುವ ಸಂಸ್ಕೃತಿಯನ್ನು ಎತ್ತಿ ಹಿಡಿದಿದ್ದಾರೆ. ಜಾತಿ ಮತ್ತು ಅಸ್ಪೃಶ್ಯತೆ ಆಚರಣೆ, ಅನ್ಯ ಧರ್ಮೀಯರ ಬಗ್ಗೆ ತಿರಸ್ಕಾರ, ಆಹಾರ ಸಂಸ್ಕೃತಿಯನ್ನು ಎತ್ತಿ ತೋರಿಸುವುದು ಮುಂತಾದವು "ಇವನಾರವ" ಎನ್ನುವ ಹೊರಹಾಕುವ ಸಂಸ್ಕೃತಿಗೆ ಸಂಬಂಧಪಟ್ಟವುಗಳಾಗಿವೆ. ಆದರೆ "ಇವ ನಮ್ಮವ" ಎನ್ನುವ ಸಂಸ್ಕೃತಿ ಇದಕ್ಕೆ ವಿರುದ್ಧವಾಗಿರುತ್ತದೆ. ಅದು ಎಲ್ಲರನ್ನೂ ಒಳಗೊಳ್ಳುವುದನ್ನು ಕಲಿಸುತ್ತದೆ. ಅದು ತನ್ನ ಒಳಗೊಳ್ಳುವ ಧರ್ಮದ ಜೀವನಮೌಲ್ಯಗಳನ್ನು ಎತ್ತಿ ಹಿಡಿಯುವುದರ ಜೊತೆಗೆ ಇತರ ಧರ್ಮಗಳ ಜೀವನಮೌಲ್ಯಗಳನ್ನು ಗೌರವಿಸುತ್ತದೆ.

ಇಂಥ ಅರಿವಿನ ಕ್ರಿಯೆಯ ಮೂಲಕವೇ ರೂಪುಗೊಳ್ಳುವ ಮಾನವಧರ್ಮ ವಿಸ್ತಾರಗೊಳ್ಳುತ್ತ ತನ್ನ ಅಸ್ತಿತ್ವವನ್ನು ವಿಶ್ವಮಯವಾಗಿಸುತ್ತದೆ. ಇದು ವಿಶ್ವಧರ್ಮವಾಗಿ ರೂಪುಗೊಳ್ಳುತ್ತದೆ. "ಮನ ನೋಯಿಸದವನೆ, ಒಬ್ಬರ ಘಾತವ ಮಾಡದವನೆ ಪರಮ

ಪಾವನ'' ಎಂದು ಸಿದ್ಧರಾಮ ತಿಳಿಸಿದ್ದಾರೆ. ''ನಯ ಒಂದು ಸವಿನುಡಿ ಹಾಗೂ ಕ್ಷಮೆಯು ದಾನ ಧರ್ಮಕ್ಕಿಂತ ಉತ್ತಮ'' ಎಂದು ಪವಿತ್ರ ಕುರಾನ್ ತಿಳಿಸಿದೆ. ''ಮನಸ್ಸನ್ನು ನಿರ್ಮಲವಾಗಿಟ್ಟುಕೊಳ್ಳುವುದೇ ಧರ್ಮ'' ಎಂದು ತಿರುವಳ್ಳುವರ್ ಹೇಳಿದ್ದಾರೆ. ''ಕರುಣೆಯ ನಿಜ ಧರ್ಮ: ತಿಳಿದರೆ ಸಾಕು. ಪ್ರೀತಿಯ ನಿಜ ಪೂಜೆ: ಈ ಭೇದವ್ಯಾಕೊ, ಸ್ನೇಹದಿ ನೀ ಸನಿಹ ಬರಲಿಲ್ಲವ್ಯಾಕೊ, ಮೊದಲಿಗೆ ಮಾನವ ನೀನಾಗು ಸಾಕು'' ಎಂದು ಸೂಫಿ ಸಂತ ಗುರು ಖಾದರಿ ಪೀರಾ ಅವರು ತಿಳಿಸಿದ್ದಾರೆ.

''ನಿಮ್ಮ ವಿಜಯವು ಮಹಿಳೆಯರ ಮತ್ತು ಮಕ್ಕಳ ರಕ್ತದಿಂದ ಕಳಂಕಿತವಾಗದಿರಲಿ. ಮರಗಳನ್ನು ನಾಶ ಮಾಡದಿರಿ, ಹೊಲಗಳನ್ನು ಸುಡದಿರಿ, ಫಲಭರಿತ ಮರಗಳನ್ನು ಕಡಿಯದಿರಿ, ಸಾಕು ಪ್ರಾಣಿಗಳಿಗೆ ಕಿರುಕುಳ ಕೊಡದಿರಿ, ಕೊಟ್ಟ ಮಾತಿಗೆ ಮತ್ತು ಆಶ್ವಾಸನೆಗೆ ಭಂಗ ತರದಿರಿ. ಧಾರ್ಮಿಕ ವ್ಯಕ್ತಿಗಳು ತಮ್ಮದೇ ಆದ ವಿಧಾನದಲ್ಲಿ ದೇವಮಾರ್ಗದಲ್ಲಿ ಸೇವೆ ಸಲ್ಲಿಸುತ್ತಿರಬಹುದು. ಅವರನ್ನು ಅವರಷ್ಟಕ್ಕೆ ಬಿಟ್ಟುಬಿಡಿ. ಅವರನ್ನು ವಧಿಸದಿರಿ. ಅವರ ಮಠ ಮಂದಿರಗಳನ್ನು ಹಾಳುಗೆಡವದಿರಿ'' ಎಂದು ಇಸ್ಲಾಂ ಧರ್ಮದ ಖಲಿಫಾ ಹಜರತ್ ಅಬೂಬಕರ್, ಸಿರಿಯಾ ದೇಶಕ್ಕೆ ಕಳಿಸಿದ ಸೇನಾ ತುಕಡಿಗೆ ನೀಡಿದ ಆದೇಶ ಇದಾಗಿದೆ. ಈ ಎಲ್ಲ ಚಿಂತನೆಗಳ ಹಿಂದೆ ಜೀವಕಾರುಣ್ಯವು ಅಡಕವಾಗಿದೆ. ಹೀಗೆ ಮಾನವಧರ್ಮದ ಅಡಿಪಾಯವಾಗಿ ಅಂತಃಕರಣವೇ ಇದೆ.

''ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ, ಪರ ವಿಚಾರಮಂ ಪರ ಧರ್ಮಮುಮಂ'' (ಅನ್ಯರ ವಿಚಾರವನ್ನು ಮತ್ತು ಧರ್ಮವನ್ನು ಸಂಪೂರ್ಣ ಸಹನೆಯಿಂದ ಕಾಣಲು ಸಾಧ್ಯವಾದರೆ ಆ ಮನಸ್ಸೇ ಪರಿಶುದ್ಧ ಬಂಗಾರ) ಎಂದು ಕವಿರಾಜಮಾರ್ಗದ ಶ್ರೀವಿಜಯ ಹೇಳಿದ್ದಾನೆ. ಭಾರತೀಯ ಶ್ರಮಣಧಾರೆಗಳೆಂದು ಗುರುತಿಸುವ ಬೌದ್ಧ, ಜೈನ, ಅಜೀವಿಕ, ನಾಥ, ಕಾಳಾಮುಖ, ಅವಧೂತ, ಸಿದ್ಧ, ಸೂಫಿ, ವಚನಕಾರ ಮುಂತಾದ ಧಾರೆಗಳ ತಾತ್ವಿಕತೆಯ ಅನ್ವಯವನ್ನು ಕಾಣಬಹುದಾದ ತತ್ವಪದಕಾರ ಪರಂಪರೆಯು ಇಂದಿಗೂ ಜೀವಂತವಾಗಿರುವ ಪರಂಪರೆ. ಸಿದ್ದರು, ಅವಧೂತರು, ಆರೂಢರು, ಆಚಲಿಗರು, ಗುರುಮಕ್ಕಳು, ಗುರುಭಕ್ತಿ ತೆಗೆದುಕೊಂಡವರು, ಶಿವಯೋಗಿಗಳು, ಬಯಲ ಸಾಧಕರು, ಅನ್ವಯ ಸಾಧಕರು ಮುಂತಾಗಿ ಕರೆಸಿಕೊಳ್ಳುವ ಈ ಸಾಧಕರಲ್ಲಿ ಅನೇಕ ಚಿಂತನಾ ಪ್ರಸ್ಥಾನಗಳಿವೆ. ಅಲ್ಲಿ ಅಲ್ಲಮನ ಬಯಲು, ನಿಜಗುಣರ ಪಟ್ಟಳ, ಶಾಕ್ತಪಂಥ, ಅಚಲ ಮಾರ್ಗ, ಅದ್ವೈತ, ನಾಥಪಂಥದ ಸಾಧಕರೂ ಇದ್ದಾರೆ. ನಂತರ ಪ್ರವೇಶಿಸಿದ ಸೂಫಿ ಪಂಥದೊಡನೆಯೂ ಇವರು ಪ್ರೀತಿಯಿಂದ ಒಡನಾಡಿದ್ದಾರೆ. ವಿಶ್ವಮಾನವ, ವಿಶ್ವಧರ್ಮದ ಕುರುಹುಗಳನ್ನು ಇಲ್ಲಿ ಬಿತ್ತಿದ್ದಾರೆ. ಜಾತಿ, ಮತ, ಮೇಲು, ಕೀಳು ಭಾರತವನ್ನು ಬಿಟ್ಟು ಬುದ್ಧನ ಕಾರುಣ್ಯಭರಿತ ವಿಶ್ವಧರ್ಮ, ವಿಶ್ವಮಾನವತ್ವವನ್ನು ಎಚ್ಚರಗೊಳಿಸಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**


1. ದೇವನೂರ ಮಹಾದೇವ, (2012), ಎದೆಗೆ ಬಿದ್ದ ಅಕ್ಷರ, ಬೆಂಗಳೂರು: ಅಭಿನವ ಪ್ರಕಾಶನ.
2. ಮೂಡ್ನಾಕೂಡು ಚಿನ್ನಸ್ವಾಮಿ, (2018), ಬಹುತ್ವದ ಭಾರತ ಮತ್ತು ಬೌದ್ಧತಾತ್ವಿಕತೆ, ಗದಗ: ಲಡಾಯಿ ಪ್ರಕಾಶನ.
3. ರಂಜಾನ್ ದರ್ಗಾ, (2024), ಧಾರ್ಮಿಕ ಸಾಮರಸ್ಯ, ಧಾರವಾಡ:ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
4. ನಟರಾಜ ಬೂದಾಳ್, (2021), ಕನ್ನಡ ಕಾವ್ಯ ಮೀಮಾಂಸೆ, ಧಾರವಾಡ:ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.